ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಮರಗಳ ಕಡಿತಲೆ ತಡೆಯಲು ಅಧಿನಿಯಮ ತರುವುದಲ್ಲ.

೯೯. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ ೧೮–೧೨–೮೭ ರಂದು ಸಿಸ್ಸಿಯಲ್ಲಿ ಅರಣ್ಯ ಮಂತ್ರಿಗಳು ಮಾಡಿದ ಪ್ರಕಟಣೆಯಂತೆ ಪಶ್ಚಿಮ ಘಟ್ಟದಲ್ಲಿ ಮತ್ತು ರಾಜ್ಯದ ಇತರ ಅರಣ್ಯ ಪ್ರದೇಶಗಳಲ್ಲಿ ಮರಗಳ ಕಡಿತಲೆ ತಡೆಯಲು ಅಧಿನಿಯಮ ತರುವ ಬಗ್ಗೆ ಕೈಗೊಂಡ ಕ್ರಮಗಳೇನು :

ಆ) ರಾಜ್ಯದಲ್ಲಿ ಈಗಿರುವ ಅರಣ್ಯ ಸಂಪತ್ತನ್ನು ರಕ್ಷಿಸಲು ಕೈಗೊಂಡ ಆಡಳಿತ ಕ್ರಮಗಳೇನು;

ಇ) ಅರಣ್ಯ ಆಧಾರಿತ ಕಾರ್ಖಾನೆಗಳಿಂದ ವಿಚಾರರಹಿತವಾಗಿ ಅರಣ್ಯದಿಂದ ಮರಗಳ ಕಡಿತಲೆ ತಡೆಯುಲು ಸರ್ಕಾರವು ವಿಧಿಸಲು ಉದ್ದೇಶಿಸಿರುವ ನಿಬಂಧನೆಗಳೇನು.

ಈ) ಅರಣ್ಯ ಸಂಪತ್ತನ್ನು ರಕ್ಷಿಸಲು ಅರಣ್ಯ ಆಧಾರಿತ ಕಾರ್ಖಾನೆಗಳ ಸಾಮರ್ಥ್ಯವನ್ನು ನಿಯಂತ್ರಿಸಲು ಮತ್ತು ಅವರಿಗೆ ನೀಡಿದ ಪರ್ಮಿಟ್ ಮತ್ತು ಲೈಸೆನ್ಸ್‌ಗಳನ್ನು ೧೦ ವರ್ಷಗಳವರೆಗೆ ಸರ್ಕಾರವು ಹಿಂತೆಗೆದುಕೊಳ್ಳುವುದೇ ?

ಶ್ರೀ ಜೆ. ಎಸ್. ಬಾಗಲಕೋಟಿ (ಅರಣ್ಯ ಮಂತ್ರಿಗಳು)

ಅ ಪಶ್ಚಿಮ ಘಟ್ಟದಲ್ಲಿ ಶೇಕಡಾ ೩೦ ರಷ್ಟು ಮಾತ್ರ ಕಾದಿಟ್ಟ ಅರಣ್ಯ ಪ್ರದೇಶವಿದೆ. ಉಳಿದ ಶೇಕಡ ೭೦ ರಷ್ಟು ಪ್ರದೇಶವು ಕಾದಿಟ್ಟ ಅರಣ್ಯದ ಹೊರಗಿನ ಪ್ರದೇಶವಾಗಿದೆ. ಈ ಹೊರಗಿನ ಪ್ರದೇಶದಲ್ಲಿ ಖಾಸಗಿ ಮತ್ತು ಜನ ಸಮುದಾಯ ವಿಶೇಷ ಹಕ್ಕುಗಳ ಪ್ರದೇಶಗಳು ಸೇರಿವೆ.

ರಾಜ್ಯದ ನಿತ್ಯ ಹರಿದ್ವರ್ಣ ಮತ್ತು ಅರೆ ನಿತ್ಯ ಹರಿದ್ವರ್ಣ ಅರಣ್ಯಗಳಲ್ಲಿ ಮರಗಳನ್ನು ಕಡಿಯದಿರುವ ನಿರ್ಧಾರ ಪರಿಶೀಲನೆಯಲ್ಲಿದೆ.

ಕರ್ನಾಟಕ ಅರಣ್ಯ ಉನ್ನತ್ನವನ್ನು ಸರ್ಕಾರದಿಂದ ಪರಿಪೂರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕ ೧೯೮೭ ಎಂಬ ವಿಧೇಯಕವನ್ನು ರಾಜ್ಯದ ಶಾಸನ ಸಭೆಗಳು ಈಗಾಗಲೇ ಅಂಗೀಕರಿಸಿವೆ. ಈ ವಿಧೇಯಕದಂತೆ, ಅರಣ್ಯ ಆಧಾರಿತ ಉದ್ದಿಮೆಗಳ ಜೊತೆಗೆ ಮಾಡಿಕೊಂಡ ಒಪ್ಪಂದಗಳ ಷರತ್ತುಗಳನ್ನು ಪರಿಸರ ಹಿತದೃಷ್ಟಿಯಿಂದ ಮತ್ತು ರಾಜ್ಯದ ಅರಣ್ಯ ಮತ್ತು ವನ್ಯಪ್ರಾಣಿ ಸಂರಕ್ಷಣೆ ದೃಷ್ಟಿಯಿಂದ ಪುನರ್ವಿಮರ್ಶಿಸಲು ಬದಲಿಸಲು ಅಥವಾ ರದ್ದುಗೊಳಿಸಲು ರಾಜ್ಯ ಸರ್ಕಾರ ಅಧಿಕಾರ ಪಡೆಯಲಿದೆ.

ಆ ರಾಜ್ಯದಲ್ಲಿ ಈಗಿರುವ ಅರಣ್ಯ ಸಂಪತ್ತನ್ನು ರಕ್ಷಿಸಲು ಕೆಳಗೆ ತಿಳಿಸಿರುವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ.—

೧) ವ್ಯವಸಾಯಕ್ಕಾಗಿ ಅರಣ್ಯ ಭೂ ಪ್ರದೇಶವನ್ನು ಬಿಡುಗಡೆ ಮಾಡುವುದನ್ನು ನಿಲ್ಲಿಸಲಾಗಿದೆ.

೨) ರಾಜ್ಯದಲ್ಲಿ ಕೈಗೊಳ್ಳುವ ಅಭಿವೃದ್ಧಿ ಯೋಜನೆಗಳ ಪೈಕಿ ಪ್ರತಿಧಾನವಾಗಿ ಗಿಡನೆಡಲು ತಗಲುವ ವೆಚ್ಚವನ್ನು ಯೋಜನೆಯಲ್ಲಿ ಭರಿಸಲು ಅವಕಾಶವಿರುವ ಪ್ರಮುಖ ಯೋಜನೆಗಳನ್ನು ಮಾತ್ರ ಕೈಗೊಳ್ಳಲು ಅಂಗೀಕರಿಸಲಾಗುತ್ತಿದೆ.

೩) ನೆಡಂತೋಪು ಬೆಳೆಸುವ ಸಲುವಾಗಿ, ರಾಜ್ಯದ ಒಳ್ಳೆಯ ಅರಣ್ಯ ಪ್ರದೇಶಗಳನ್ನು ತೆರವು ಮಾಡುವುದನ್ನು, ೧೯೮೧ ರಿಂದ ನಿಲ್ಲಿಸಲಾಗಿದೆ.

೪) ಆಯ್ಕೆ ಮಾಡಿ ಕಡಿತ ಮಾಡುವ ಮರಗಳ ಸಂಖ್ಯೆಯನ್ನು ಎಕರೆಗೆ ೬ ರಿಂದ ೩ ಕ್ಕೆ ಇಳಿಸಲಾಗಿದೆ. ಈ ವಿಧಾನದಿಂದ ಸಂಗ್ರಹವಾಗುತ್ತಿರುವ ಮರಗಳು ಜನರ ಮತ್ತು ಕೈಗಾರಿಕೆಗಳ ಕನಿಷ್ಠ ಅವಶ್ಯಕತೆಗಳಿಗೆ ಬೇಕಾಗುತ್ತದೆ. ರಾಜ್ಯದಲ್ಲಿ ಹತ್ತು ವರ್ಷಗಳ ಹಿಂದೆ ಸಂಗ್ರಹವಾಗುತ್ತಿರುವ ಮರದ ಪ್ರಮಾಣಕ್ಕೆ ಹೋಲ್ಲಿಸಿದ್ದಲ್ಲಿ, ಈಗ ಇದರ ೧/೩ ಭಾಗ ಮಾತ್ರ ಮರ ಸಂಗ್ರಹವಾಗುತ್ತಿದೆ.

ಜ) ಪಾಸಗಿ ಜನರಿಂದ ಗಿಡ ನೆಡುವ ಕಾರ್ಯಕ್ರಮಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ.

೬) ಅರಣ್ಯ ಆಧಾರಿತ ಕಾರ್ಖಾನೆಗಳು ತಮಗೆ ಬೇಕಾದ ಕಚ್ಚಾ ಪಾಲನ್ನು ಉದ್ದಿಮೆ ಅಡಿಯಲ್ಲಿ ಬೆಳೆಸಲು ಪ್ರೋತ್ಸಾಹ ನೀಡಲಾಗುತ್ತಿದೆ.

೭) ಇಂಧನ ಸೌದೆ ಸಂಗ್ರಹಿಸಿ. ಸುಮಾರು ೧೨೩ ಸೌದೆ ಡಿಪೋಗಳಿಂದ ಕಡಿಮೆ ದರಗಳಂತೆ ಸೌದೆಯನ್ನು ಜನರಿಗೆ ಪೂರೈಸಲಾಗುತ್ತಿದೆ.

೮) ಆಮದು ಮಾಡುತ್ತಿರುವ ಮರದ ಮೇಲೆ ಆಮದು ಶುಲ್ಕ ನಮ್ಮ ರಾಜ್ಯದ ಶಿಫಾರಸ್ಸಿನಂತೆ ಕಡಿಮೆಯಾಗಿ ಮರದ ಆಮದು ಹೆಚ್ಚುತ್ತಿದೆ ಆಮದು ಇನ್ನೂ ಹೆಚ್ಚಾಗಲು ಪೂರ್ತಿ ಶುಲ್ಕ ತೆಗೆಯಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ರಾಜ್ಯ ಮಾಡಿದೆ.

೯) ಮರಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗುವ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರ ನೀಡಲಾಗಿದೆ.

೧೦) ಅರಣ್ಯ ರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

೩) ಅರಣ್ಯ ಆಧಾರಿತ ಕಾರ್ಖಾನೆಗಳಿಂದ ವಿಚಾರ ರಹಿತ ಅರಣ್ಯದಿಂದ ಮರಗಳ ಕಡಿತಲೆ ನಡೆಯುತ್ತಿಲ್ಲ.

ಈ) ಇಲ್ಲ.

ರಾಜ್ಯದಲ್ಲಿ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ

೫೬. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ),—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೧೯೮೫ ರಿಂದ ಇದುವರೆವಿಗೆ ಎಷ್ಟು ಮನೆಗಳಿಗೆ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ ?

ಆ) ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಪಡೆದ ನಂತರ ಫಲಾನುಭವಿಗಳು ವಿದ್ಯುತ್ ದರ ಕಟ್ಟಬೇಕಾಗಿದೆಯೇ ?

ಇ) ಕಟ್ಟಬೇಕಾಗಿದ್ದರೆ ಯಾವ ದರದಲ್ಲಿ ಹಾಗೂ ಯಾವ ರೀತಿ, ವಿವರಣೆ ನೀಡುವುದು.

ಈ) ಅನೇಕ ವರ್ಷಗಳಿಂದಲೂ ಬಿಲ್ ನೀಡದೇ ಏಕಾ ಏಕಿ ಬಿಲ್‌ಗಳನ್ನು ನೀಡಿ ಹಣ ಪಾವತಿ ಮಾಡದವರ ಮನೆಗಳಿಗೆ ವಿದ್ಯುತ್ ಕಡಿತಗೊಳಿಸಿರುವುದು, ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ.—(ವಿದ್ಯುತ್ ರಾಜ್ಯ ಮಂತ್ರಿಗಳು)

ಅ) ರಾಜ್ಯದಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ೧೯೮೫-೮೬. ೮೬-೮೭ ಮತ್ತು ೧-೪-೮೭ ರಿಂದ ೩೧-೧೨-೮೭ ರ ವರೆಗೆ ವಿದ್ಯುತ್ ಸೌಲಭ್ಯ ಒದಗಿಸಿರುವ ಮನೆಗಳ ಸಂಖ್ಯೆ ೭೬,೩೫೯.

ಆ) ಹೌದು.

ಇ) ೪-೯-೮೬ ಕ್ಕೂ ಮುಂಚೆ ವಿದ್ಯುತ್ ಪಡೆದ ಫಲಾನುಭವಿಗಳಿಂ ತಿಂಗಳಿಗೆ ರೂ. ೨.೫೦ ವಿದ್ಯುತ್ ಉಪಯೋಗದ ಹಣ ಮತ್ತು ರೂ. ೨.೧೯ ಮಂಡಳಿಗೆ ವಿದ್ಯುತ್ ಒದಗಿಸಲು ತಗಲಿದ ವೆಚ್ಚ ಮತ್ತು ಬಡ್ಡಿಯಂ ಬಾಬ್ತು ಕಟ್ಟಬೇಕು. ೪-೯-೮೬ ರಿಂದ ಈಚೆಗೆ ವಿದ್ಯುತ್ ಪಡೆದ ಫಲಾನುಭವಿಗಳು ಕ್ರಮವಾಗಿ ರೂ. ೨.೫೦ ಮತ್ತು ರೂ. ೨.೬೦ ಮಂಡಳಿಗೆ ಕಟ್ಟಬೇಕು.

ಈ) ಮಂಡಳಿಯು ಫಲಾನುಭವಿಗಳಿಗೆ ಜಾರಿಯಲ್ಲಿರುವ ಪದ್ಧತಿಯಂತೆ ಬಿಲ್‌ಗಳನ್ನು ಕೊಡುತ್ತಾ ಬಂದಿದೆ. ಮತ್ತು ಏಕಾ ಏಕಿ ಬಿಲ್‌ಗಳನ್ನು ನೀಡಿಲ್ಲ, ಫಲಾನುಭವಿಗಳಿಗೆ ಮಾಹಿತಿಯಾನ ವಾಯಿದೆಯ ದಿನದಿಂದ ೧೨ ದಿನಗಳೊಳಗೆ ಮಂಡಳಿಗೆ ಹಣ ಪಾವತಿ ಮಾಡಬೇಕು ತಪ್ಪಿದಲ್ಲಿ ವಿದ್ಯುತ್